ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

10

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಪರಿಷತ್ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ ದಿನಾಂಕ : DATE 9/2/2021

## 'ದಯಪಾಲಿಸಿದ ಭಾಷಣ' ಪದ ಬ್ರಿಟಿಷ್ ಪಳೆಯುಳಿಕೆ: ಆಯನೂರು

ವಿಧಾನ ಪರಿಷತ್: ಸ್ವಾತಂತ್ರ್ಯ ಬಂದು 70 ವರ್ಷವಾಗಿದ್ದರೂ ರಾಜ್ಯಪಾಲರು ವಿಧಾನಮಂಡಲ ಸದಸ್ಯರನ್ನು ಉದ್ದೇಶಿಸಿ ಮಾತನಾಡಿರುವುದನ್ನು 'ದಯಪಾಲಿಸಿದ ಭಾಷಣ' ಎಂದು ಹೇಳುವುದು ಗುಲಾಮಿ ಭಾಷೆ, ಬ್ರಿಟಿಷರ ಪಳೆಯುಳಿಕೆಯ ಶಬ್ದ. ಇದಕ್ಕೆ ಕೊನೆ ಹಾಡಬೇಕೆಂದು ಬಿಜೆಪಿ ಸದಸ್ಯ ಆಯನೂರು ಮಂಜುನಾಥ್ ಬಲವಾಗಿ ಪ್ರತಿಪಾದಿಸಿದರು. ವಿಧಾನ ಮಂಡಳದ ಸದಸ್ಯರನ್ನು ಉದ್ದೇಶಿಸಿ ರಾಜ್ಯಪಾಲರು ಮಾಡಿದ ಭಾಷಣದ ಮೇಲಿನ ವಂದನಾ ನಿರ್ಣಯ ಪ್ರಸ್ತಾವದ ಮೇಲೆ ಮಾತನಾಡಿದ ಅವರು, ರಾಜರ ಆಡಳಿತದಲ್ಲಿಯೂ ಈ ರೀತಿಯ ಪದ ಬಳಕೆ ಇರಲಿಲ್ಲ. ಸರ್ಕಾರದ ಮುಂದಿನ ದಿಕ್ಸೂಚಿಯನ್ನು ತೋರಿಸುವ ಸಿದ್ಧಪಡಿಸಿದ ಭಾಷಣವನ್ನು ರಾಜ್ಯಪಾಲರು ಓದುತ್ತಾರೆ. ಇದರಲ್ಲಿ ದಯಪಾಲಿಸುವ ಏನು ಬಂತು? ಹೀಗಿರುವಾಗ 'ದಯಪಾಲಿಸಿದ ಭಾಷಣ' ಎಂಬ ಶಬ್ದ ಬಳಕೆ ಗುಲಾಮಿ ಭಾಷೆಯಾಗಿದೆ. ಮುಂದಿನ ದಿನಗಳಲ್ಲಿ ಇಂತಹ ಪದ ಬಳಕೆಯಾಗದಂತೆ ನಾವೆಲ್ಲರೂ ನೋಡಿಕೊಳ್ಳಬೇಕು ಎಂದರು.